## ಬೇರೆ ಕಲರ್ ಪ್ಲೀಸ್!...

ಒಮ್ಮೆ ಗುಂಡಿ ಮತ್ತು ಪಮ್ಮಿ ಬಟ್ಟೆ ತೆಗೆದುಕೊಳ್ಳಲು ಅಂಗಡಿಗೆ ಹೋಗಬೇಕಿತ್ತು. ಅದಕ್ಕೂ ಮೊದಲು ಪಮ್ಮಿಗೆ ಗಂಡು ಹುಡುಕಲು ಮ್ಯಾರೇಜ್ ಬ್ಯೂರೋಗೆ ಹೋಗಬೇಕಾಯ್ತು. ಅಲ್ಲಿದ್ದ ಮ್ಯಾನೇಜರ್, ಒಬ್ಬ ವ್ಯಕ್ತಿಯ ಬಗ್ಗೆ ಮಾಹಿತಿ ನೀಡುತ್ತಾ 'ಇವನು ಒಳ್ಳೆಯ ಕೆಲಸದಲ್ಲಿದ್ದಾನೆ, ಕೈ ತುಂಬಾ ಸಂಬಳ, ಆದರೆ ಹುಡುಗ ಸ್ವಲ್ಪ ಕಪ್ಪು' ಎಂದ. ಗುಂಡಿ, 'ಸಾರ್, ಇದೇ ಡಿಸೈನ್‌ನಲ್ಲಿ ಸ್ವಲ್ಪ ಬೇರೆ ಕಲರ್ ಇದ್ರೆ ತೋರಿಸಿ' ಎಂದಾಗ, ಮ್ಯಾನೇಜರ್ ಕಂಗಣ್ಣು ಬೀರಿದ. ಕೂಡಲೇ ಅವಳಿಗೆ ಅರಿವಾಯಿತು, ತಾವು ಬಟ್ಟೆ ಅಂಗಡಿಯಲ್ಲಿ ಇಲ್ಲವೆಂದು!...

**ಸಿ.ಆರ್. ಪುಷ್ಪ**



## ಬಾಳಿನ ಚಂದಿರನಾಗು...



ಗುಂಡ ಮತ್ತು ಗುಂಡಿ ಒಂದೇ ಕಾಲೇಜಿನಲ್ಲಿ ಓದುತ್ತಿದ್ದರು. ಸ್ನೇಹ ಪ್ರೀತಿಗೆ ತಿರುಗಿತು. ವಿಷಯ ಹುಡುಗಿಯ ಮನೆಯವರಿಗೆ ತಿಳಿಯಿತು. ಚೆನ್ನಾಗಿ ಓದಿ ಮುಂದೆ ಬರಬೇಕು ಎನ್ನುವಂತಿದ್ದರೆ ಗುಂಡನ ಸಹವಾಸ ಬಿಡಬೇಕು ಎಂದು ಅವರು ತಾಕೀತು ಮಾಡಿದರು. ಅದೊಂದು ದಿನ ಗುಂಡನ ಹತ್ತಿರ ಬಂದ ಗುಂಡಿ, 'ನೀನು ನನ್ನ ಬಾಳಿನ ಚಂದಿರನಾಗುತ್ತೀಯಾ?' ಎಂದು ಕೇಳಿದಳು. ಖುಷಿಯಾದ ಗುಂಡ, 'ವ್ಹಾ... ಇಂತಹ ಅವಕಾಶ ಯಾರಿಗುಂಟು, ಯಾರಾದ್ರೂ ಬೇಡ ಅಂತಾರಾ?' ಎಂದ. ಆಗ ಗುಂಡಿ, 'ಹಾಗಾದರೆ ನೀನು ನನ್ನಿಂದ ನಾಲ್ಕು ಲಕ್ಷ ಕೀ.ಮೀ. ದೂರ ಹೋಗಬೇಕು' ಎಂದಾಗ ಗುಂಡ ಕಕ್ಕಾಬಿಕ್ಕಿಯಾದ.

**ರವಿ ಎಂ. ಪೈ**